ಓ ಎಸ್ ನಂಃ **41/2018**
**ಡಿ. ಡಬ್ಲ್ಯೂ ಃ 1**

**ದಿಃ 21.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ವಿ ಜಿ ವಕೀಲರಿಂದ ಃ**

ನಿ ಡಿ 2 ರಲ್ಲಿ ನಾನು ಅಥವಾ ನನ್ನ ಮಗ ಪಾರ್ಟಿ ಅಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಪರವಾಗಿ ಕೇಸ್ ನ್ನು ಮಾಡಿರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ಅದರಲ್ಲಿ ನಾನು ಮತ್ತು ನನ್ನ ಮಗ ಪಾರ್ಟಿ ಇರುವುದಿಲ್ಲ. ಸ.ನಂ. 38/4 ಆ ಅಪೀಲಿನಲ್ಲಿ ಇಲ್ಲ ಎಂದರೆ ಸರಿ. ಎಂ ಆರ್ 17 ಇದನ್ನು ಪ್ರಶ್ನೆ ಮಾಡಿರುತ್ತೇವೆ. ಪೋಡಿಯನ್ನು ರದ್ದುಪಡಿಸಿ ಮಾಡಲು ಹಾಕಿದ ಅಪೀಲು ಅಲ್ಲ ಎಂದರೆ ಸರಿಯಲ್ಲ. ಸ.ನಂ. 38/4 ರಲ್ಲಿ ಆಗಿರುವ ಪೋಡಿ ಸರಿ ಇಲ್ಲ ಎಂದು ನಾನು ಡಿ ಡಿ ಎಲ್ ಆರ್ ಮತ್ತು ಜೆ ಡಿ ಎಲ್ ಆರ್ ಇವರ ಮುಂದೆ ಪ್ರಶ್ನೆ ಮಾಡಿದ್ದೇನೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಕೊಟ್ಟಿದ್ದೇನೆ. ನಾವು ಯಾವುದೆ ದಾಖಲೆ ಕೊಟ್ಟಿಲ್ಲದೆ ಇದ್ದರೂ ಸಹ ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸ.ನಂ. 38/4 ರಲ್ಲಿ ಮಾಡಿರುವ ಪೋಡಿ ಕ್ರಮಬದ್ದವಾಗಿದೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾನು ಯಾವುದೆ ಅಪೀಲು ಮಾಡಿಲ್ಲ ಎಂದರೆ ಸರಿಯಲ್ಲ. ಸ.ನಂ. 38/4 ರಲ್ಲಿ 30 ಗುಂಟೆಯಲ್ಲಿ ನಾನೇ ಸ್ವಾಧೀನದಲ್ಲಿರುತ್ತೇನೆ. ಸ.ನ, 38/4 ರಲ್ಲಿ ಈಗ ಪಹಣಿಯಲ್ಲಿ 21 ಗುಂಟೆ ಬರುತ್ತಿದೆ ಎಂದರೆ ಸರಿ. ಅದನ್ನು ವಾದಿಗಳೇ ತಪ್ಪಾಗಿ ಮಾಡಿಸಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನಿ ಡಿ 4 ಇದು ಕೇಸ್ ಹಾಕಿದ ನಂತರ ಕೊಟ್ಟ ಅರ್ಜಿ ಎಂದರೆ ಸರಿ.ನಿ ಡಿ 5 ನ್ನು ಪೋಡಿ ಮಾಡಬಾರದು ಎಂದು ತಕರಾರು ಕೊಟ್ಟಿಲ್ಲ ಎಂದರೆ ಸರಿ. ಖಾತೆ ಮಾಡಬಾರದು ಎಂದು ಕೊಟ್ಟಿದ್ದೇವೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕೇಸ್ ಗೆ ಸಂಬಂದಪಡದ ದಾಖಲೆಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಕ್ರಯಪತ್ರ ಬರೆದುಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ದಾಖಲೆಗಳನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**